ಅ) ಅಥಣಿ ತಾಲ್ಲೂಕಿನಲ್ಲಿ ಹೆಚ್ಚಿನ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಅಥಣಿಯಲ್ಲಿ ಒಂದು 220 ಕೆ.ವಿ. ಸ್ಟೇಷನನ್ನು ನಿರ್ಮಾಣ ಮಾಡಲು ಉದ್ದೇಶಿಸಿದೆ. ಈ ಉದ್ದೇಶಿತ 220 ಕೆ.ವಿ. ಸ್ಟೇಷನ್ನಿನ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ಗುರುತಿಸಲಾಗಿದ್ದು, ಈ ವಿಷಯದಲ್ಲಿ ಚಿಕ್ಕೋಡಿ ಉಪ ವಿಭಾಗಾಧಿಕಾರಿಗಳನ್ನು ಸಂಪರ್ಕಿಸಲಾಗಿದ್ದು ಭೂ ಸ್ವಾಧೀನ ಪ್ರಕ್ರಿಯೆಯು ಜಾರಿಯಲ್ಲಿದೆ. ಈ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ, ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ನಂತರವೇ ಕಾಮಗಾರಿಯ ನಿರ್ವಹಣೆಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ. ಭೂಮಿಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಹಸ್ತಾಂತರಗೊಂಡ ನಂತರ, ಸದರೀ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲು ಅನುಕೂಲವಾಗುತ್ತದೆ.

ಆ) ಅಥಣಿ ತಾಲ್ಲೂಕಿನ ಐಗಳಿಯಲ್ಲಿರುವ 33 ಕೆ.ವಿ. ಸಬ್ ಸ್ಟೇಷನ್‌ನಿಂದ 25 ಗ್ರಾಮಗಳಿಗೆ ಪ್ರಸ್ತುತ ವಿದ್ಯುತ್ ಸರಬರಾಜಾಗುತ್ತಿದೆ. ಈ 33 ಕೆ.ವಿ. ಸಬ್‌ಸ್ಟೇಷನ್ನಿನ ಒಟ್ಟು ಸಾಮರ್ಥ್ಯ 10 ಎಂ.ವಿ.ಎ ಆಗಿದ್ದು ಗರಿಷ್ಠ ಬೇಡಿಕೆಯನ್ನು ಎಂಟು 11 ಕೆ.ವಿ. ಫೀಡರ್‌ಗಳ ಮೂಲಕ ಪೂರೈಕೆ ಮಾಡಲಾಗುತ್ತಿದೆ. ಸದರಿ 33 ಕೆ.ವಿ. ಸಬ್ ಸ್ಟೇಷನ್ನು 110 ಕೆ.ವಿ. ಸ್ಟೇಷನ್ನಾಗಿ ಮೇಲ್ದರ್ಜೆಗೊಳಿಸುವ ಪ್ರಸ್ತಾವನೆಯನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಿಂದ ನಿರೀಕ್ಷಿಸಲಾಗಿದೆ. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಿಂದ ಈ ವಿಷಯದಲ್ಲಿ ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ ತಾಂತ್ರಿಕ ಸಮನ್ವಯ ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಲಾಗುವುದು. ತಾಂತ್ರಿಕ ಸಮನ್ವಯ ಸಮಿತಿಯು ಈ ನಿಟ್ಟಿನಲ್ಲಿ ತೆಗೆದುಕೊಳ್ಳುವ ತೀರ್ಮಾನದ ಪ್ರಕಾರ ಮುಂದಿನ ಕ್ರಮವನ್ನು ಜರುಗಿಸಲಾಗುವುದು.

ಹಲ್ಯಾಣ ಏತ ನೀರಾವರಿ ಯೋಜನೆಯ ವಿದ್ಯುತ್ ಬೇಡಿಕೆಯನ್ನು ಕುಡುಚಿಯಲ್ಲಿ ನಿರ್ಮಾಣ ಮಾಡಲಾಗುವ 220 ಕೆ.ವಿ. ಸ್ಟೇಷನ್‌ನಿಂದ ಪೂರೈಸಲಾಗುವುದು. ಐನಾಪೂರ ಏತ ನೀರಾವರಿ ಯೋಜನೆಗೆ ವಿದ್ಯುತ್ ಮಂಜೂರಾತಿ ಬಗ್ಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಕರಿಮಸೂರಿ ಏತ ನೀರಾವರಿ ಯೋಜನೆಗೆ ವಿದ್ಯುತ್ ಒದಗಿಸುವ ವಿಷಯವು ಪ್ರಾರಂಭಿಕ ಹಂತದಲ್ಲಿದೆ.

ಅಥಣಿ ತಾಲ್ಲೂಕಿನಲ್ಲಿ ಅಬಕಾರಿ ಇಲಾಖೆಯ ಪರವಾನಗಿ ಪಡೆದ ಬಾರ್ ಮತ್ತು ಸಾರಾಯಿ ಅಂಗಡಿಗಳು

2055 (2478) - ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ): ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಅಥಣಿ ತಾಲ್ಲೂಕಿನಲ್ಲಿ ಅಬಕಾರಿ ಇಲಾಖೆಯಿಂದ ಪರವಾನಗಿ ಪಡೆದ ಬಾರ್ ಮತ್ತು ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು? (ಪ್ರತ್ಯೇಕ ವಿವರ ನೀಡುವುದು)

ಆ) ಅಥಣಿ ತಾಲ್ಲೂಕಿನಲ್ಲಿ ಪರವಾನಗಿ ಪಡೆಯದೆ ನೂರಾರು ಸಾರಾಯಿ ಅಂಗಡಿಗಳು ಮತ್ತು ಕೆಲವು ಬಾರ್‌ಗಳು ಕಾಯಿದೆ ಬಾಹಿರವಾಗಿ (ಅಕ್ರಮವಾಗಿ) ನಡೆಯುತ್ತಿದ್ದು, ತನ್ಮೂಲಕ

ಸರ್ಕಾರದ ಬೊಕ್ಕಸಕ್ಕೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಾದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಎಂ. ನಾಣಯ್ಯ (ಅಬಕಾರಿ ಸಚಿವರು):

ಅ) 1. ಸಿ.ಎಲ್.2 (ಚಿಲ್ಲರೆ ಮದ್ಯದಂಗಡಿಗಳು) - 22

2. ಸಿ.ಎಲ್. 9 (ಬಾರ್ ಮತ್ತು ರೆಸ್ಟೋರೆಂಟ್) - 08

3. ಸಾರಾಯಿ ಅಂಗಡಿಗಳು - 85

ಆ) ಅಥಣಿ ತಾಲ್ಲೂಕಿನಲ್ಲಿ ಪರವಾನಗಿ ಪಡೆಯದೆ ನಡೆಸುತ್ತಿದ್ದ ಎರಡು ಸಾರಾಯಿ ಅಂಗಡಿಗಳ ಮೇಲೆ ಹಾಗೂ ಒಂದು ಡಾಬಾದ ಮೇಲೆ ಪ್ರಕರಣ ದಾಖಲು ಮಾಡಿಕೊಂಡಿದ್ದು ಅವುಗಳ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗಿದೆ.

ಶಿರಹಟ್ಟಿ ಮತಕ್ಷೇತ್ರದಲ್ಲಿ ಬರುವ ಶಿದ್ದಾಪುರ ಕೆರೆ

2056 (2507) - ಶ್ರೀ ಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಹಟ್ಟಿ ಮತಕ್ಷೇತ್ರದಲ್ಲಿ ಇರುವ ಶಿದ್ದಾಪುರ ಕೆರೆ (ಹಾವೇರಿ ಜಿಲ್ಲೆಯ ಸವಣೂರ ಹದ್ದಿನಲ್ಲಿ ಇರುವ) ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಶಿದ್ದಾಪುರ ಕೆರೆಯ ವಿಸ್ತೀರ್ಣ ಹಾಗೂ ಅದರಿಂದ ಎಷ್ಟು ಭೂಮಿ ನೀರಾವರಿ ಆಗಬಹುದು;

ಇ) ಸದರಿ ಕೆರೆ ದುರಸ್ತಿ ಹಾಗೂ ಹೂಳು ಎತ್ತಲು ಸರ್ಕಾರ ಅನುಸರಿಸುತ್ತಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಹೌದು.

ಆ) ಈ ಕೆರೆಯ ವಿಸ್ತೀರ್ಣ 7.90 ಹೆಕ್ಟೇರ್ ಇದ್ದು, ಸದರಿ ಕೆರೆಯ ಉದ್ದೇಶಿತ ಅಚ್ಚುಕಟ್ಟು 90-30 ಹೆಕ್ಟೇರ್ ಇರುತ್ತದೆ.

ಇ) ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಮರಳು ತುಂಬುವ ಗಾಡಿಗಳ ಸಂಚಾರದಿಂದ ರಸ್ತೆಗಳು ಹಾಳಾಗುತ್ತಿರುವ ವಿಚಾರ

2057 (2508) - ಶ್ರೀಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮರಳು ತುಂಬುವ ಗಾಡಿಗಳ ಸಂಚಾರದಿಂದ ರಸ್ತೆಗಳು ಹಾಳಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಚಾರದಲ್ಲಿ ಸರಕಾರ ಅನುಸರಿಸುತ್ತಿರುವ ಮಾನದಂಡ ಏನು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಹೌದು.